ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಆಯುಕ್ತಾಲಯ
ರಾಷ್ಟ್ರೀಯ ಸೇವಾ ಯೋಜನೆ

ಸಂಖ್ಯೆ: ಡಿಟಿಇ/ಎನ್ಎಸ್ಎಸ್/ಚಟುವಟಿಕೆ/02/2019-20

ನಿರ್ದೇಶಕರ ಕಛೇರಿ,
ಅರಮನೆ ರಸ್ತೆ ಬೆಂಗಳೂರು-01
ದಿನಾಂಕ: 31-12-2021

**ಸುತ್ತೋಲೆ**

**ವಿಷಯ** : 15 ರಿಂದ 18 ವರ್ಷದೊಳಗಿನ ಮಕ್ಕಳಿಗೆ ಕೋವಿಡ್-19 ಲಸಿಕಾಕರಣದ ಬಗ್ಗೆ.

**ಉಲ್ಲೇಖ** : ರಾಷ್ಟ್ರೀಯ ಆರೋಗ್ಯ ಅಭಿಯಾನ ನಿರ್ದೇಶಕರ ಪತ್ರ ಸಂಖ್ಯೆ: ಎನ್ಎಚ್ಎಂ/ ಡಿಡಿ/ ಐಎಂಎಂ/ 82/ 2021-22 ದಿನಾಂಕ: 30.12.2021

*****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, 15 ರಿಂದ 18 ವರ್ಷದೊಳಗಿನ ಮಕ್ಕಳಿಗೆ ದಿನಾಂಕ 03.01.2022 ರಿಂದ ರಾಜ್ಯದಲ್ಲಿ ಕೋವ್ಯಾಕ್ಸಿನ್ ಲಸಿಕೆಯ ಮೂಲಕ ಲಸಿಕಾಕರಣ ನಡೆಸಲಾಗುವುದು. ಈ ಕಾರ್ಯವನ್ನು ಆರೋಗ್ಯ ಇಲಾಖೆಯ ಸಹಕಾರ ಹಾಗೂ ಸಮನ್ವಯದೊಂದಿಗೆ ಯೋಜಿಸಿ ಯಶಸ್ವಿಗೊಳಿಸಲು ತಿಳಿಸಿದೆ.

ಹೆಚ್ಚಿನ ಮಾಹಿತಿಗಾಗಿ ಉಲ್ಲೇಖಿತ ಪತ್ರವನ್ನು ಲಗತ್ತಿಸಿದೆ.

ನಿರ್ದೇಶಕರು

ಇವರಿಗೆ

1 ರಾಷ್ಟ್ರೀಯ ಆರೋಗ್ಯ ಅಭಿಯಾನ ನಿರ್ದೇಶಕರು, ಕರ್ನಾಟಕ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ ಬೆಂಗಳೂರು- ಮಾಹಿತಿಗಾಗಿ
2 ರಾಜ್ಯದ ಎಲ್ಲಾ ಪಾಲಿಟೆಕ್ನಿಕ್ ಸಂಸ್ಥೆಗಳ ಪ್ರಾಚಾರ್ಯಗಳಿಗೆ-ಸೂಕ್ತ ಕ್ರಮಕ್ಕಾಗಿ.

ಕರ್ನಾಟಕ ಸರ್ಕಾರ
# ರಾಷ್ಟ್ರೀಯ ಆರೋಗ್ಯ ಅಭಿಯಾನ
ಕರ್ನಾಟಕ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ, ಬೆಂಗಳೂರು
ಆರೋಗ್ಯ ಸೌಧ, 1ನೇ ಮಹಡಿ, ಮಾಗಡಿ ರಸ್ತೆ, ಬೆಂಗಳೂರು-560023

ಸಂಖ್ಯೆ:ಎನ್‌ಹೆಚ್‌ಎಂ/ಡಿಡಿ/ಐಎಂಎಂ/82/2021-22 ದಿನಾಂಕ: 30.12.2021

ಇವರಿಗೆ,

ಆಯುಕ್ತರು,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು.

ಮಾನ್ಯರೆ,

ವಿಷಯ: 15 ರಿಂದ 18 ವರ್ಷದೊಳಗಿನ ಮಕ್ಕಳಿಗೆ ಕೋವಿಡ್-19 ಲಸಿಕಾಕರಣ ನಡೆಸುವ ಕುರಿತು

ಉಲ್ಲೇಖ:
1. ಭಾರತ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಾಲಯದ ಪತ್ರ ಸಂಖ್ಯೆ: D.O.No: 2467806/2021/Imm ದಿನಾಂಕ: 28.12.2021
2. ದಿನಾಂಕ 28.12.2021 ರಂದು ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು, ಕರ್ನಾಟಕ ಸರ್ಕಾರ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಚರ್ಚಿಸಿ ನಿರ್ದೇಶಿಸಿದಂತೆ.

*********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ 1 ರ ಭಾರತ ಸರ್ಕಾರದ ಪತ್ರದಲ್ಲಿ 15 ರಿಂದ 18 ವರ್ಷದೊಳಗಿನ ಮಕ್ಕಳಿಗೆ ದಿನಾಂಕ:03.01.2022 ರಿಂದ ರಾಜ್ಯದಲ್ಲಿ ಕೋವ್ಯಾಕ್ಸಿನ್ ಲಸಿಕೆ ಬಳಸಿ ಕೋವಿಡ್-19 ಲಸಿಕಾಕರಣ ನಡೆಸಲು ತಿಳಿಸಿರುತ್ತಾರೆ. 2007 ರ ಇಸವಿಯಲ್ಲಿ ಮತ್ತು 2007 ರ ಮುಂಚೆ ಜನಸಿದ 15 ರಿಂದ 18 ವರ್ಷದೊಳಗಿನ ಮಕ್ಕಳಿಗೆ ಕೋವ್ಯಾಕ್ಸಿನ್ ಲಸಿಕೆ ಬಳಸಿ ಲಸಿಕಾಕರಣ ನಡೆಸಲಾಗುವುದು. ಈ ಕಾರ್ಯಕ್ರಮದ ಯಶಸ್ವಿ ಅನುಷ್ಠಾನಕ್ಕಾಗಿ ತಮ್ಮ ಇಲಾಖೆಯ ಅತ್ಯಮೂಲ್ಯ ಸಹಕಾರ ಹಾಗೂ ಬೆಂಬಲವನ್ನು ಕೋರಲಾಗಿದೆ.

ಈ ಸಂಬಂಧ ತಮ್ಮ ಇಲಾಖೆಯು ಆರೋಗ್ಯ ಇಲಾಖೆಯೊಂದಿಗೆ ಸಮನ್ವಯಿಸಿ ಸಹಕರಿಸಿ ಯಶಸ್ವಿಗೊಳಿಸಲು ಈ ಕೆಳಕಂಡಂತೆ ಕ್ರಮ ಕೈಗೊಳ್ಳುವುದು.

1. ತಾಂತ್ರಿಕ ಶಿಕ್ಷಣ ಸಂಸ್ಥೆಗಳಲ್ಲಿ ಓದುತ್ತಿರುವ 18 ವರ್ಷದೊಳಗಿನ ವಿದ್ಯಾರ್ಥಿಗಳ Line list ಅನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಿಗೆ ಒದಗಿಸುವುದು.
2. ಅರ್ಹ ಮಕ್ಕಳಿಗೆ ತಮ್ಮ ತಾಂತ್ರಿಕ ಶಿಕ್ಷಣ ಸಂಸ್ಥೆಗಳಲ್ಲಿಯೇ ಲಸಿಕಾಕರಣ ಆಯೋಜಿಸಿ ಮುಂಚಿತವಾಗಿಯೇ ಲಸಿಕಾಕರಣದ ದಿನಾಂಕವನ್ನು ತಿಳಿಸುವುದು. ತಾಂತ್ರಿಕ ಶಿಕ್ಷಣ ಸಂಸ್ಥೆಗಳಲ್ಲಿನ ಅರ್ಹ ಮಕ್ಕಳ ಸಂಖ್ಯೆಗನುಗುಣವಾಗಿ ಸೂಕ್ಷ್ಮ ಕ್ರಿಯಾ ಯೋಜನೆ ಮತ್ತು ಅನುಷ್ಠಾನ ಕಾರ್ಯತಂತ್ರಗಳನ್ನು ಎರಡೂ ಇಲಾಖೆಗಳು ಜಂಟಿಯಾಗಿ ಆಯೋಜಿಸುವುದು.
3. ಲಸಿಕಾಕರಣಕ್ಕೆ ಮುನ್ನ ಪೋಷಕರಿಗೆ ಕೋವಿಡ್-19 ಲಸಿಕಾಕರಣದ ಮಹತ್ವದ ಕುರಿತು ಜಾಗೃತಿ ಮೂಡಿಸುವುದು.

4. ಲಸಿಕಾ ಸತ್ರಗಳನ್ನು ಕಾಲೇಜಿನಲ್ಲಿಯೇ ಆಯೋಜಿಸಲು 3 ಕೊಠಡಿಗಳು, ಅವಶ್ಯ ಸಿಬ್ಬಂದಿ, ನೀರು, ಕೈ ತೊಳೆಯುವ ಸೌಲಭ್ಯದಂತಹ ಮೂಲ ಸೌಕರ್ಯಗಳನ್ನು ಒದಗಿಸಿಕೊಡುವುದು. ಎಲ್ಲಾ ಹಂತಗಳಲ್ಲಿಯೂ ಕೋವಿಡ್-19 ಮುಂಜಾಗ್ರತ ಕ್ರಮಗಳಾದ ಮಾಸ್ಕ್, ಸ್ಯಾನಿಟೈಸರ್ ಮತ್ತು 2 ಮೀಟರ್ ಅಂತರ ಇವುಗಳನ್ನು ಕಡ್ಡಾಯವಾಗಿ ಪಾಲಿಸುವುದು.
5. ಲಸಿಕೆ ಪಡೆಯುವ ಮಕ್ಕಳ / ತಂದೆ ತಾಯಿ/ಪೋಷಕರ ದೂರವಾಣಿ ಸಂಖ್ಯೆಯನ್ನು ಬಳಸಿ ಲಸಿಕಾಕರಣ ನಡೆಸಲಾಗುವುದು. ಪೋಷಕರ ದೂರವಾಣಿ ಸಂಖ್ಯೆ ಲಭ್ಯವಿಲ್ಲದಿದ್ದರೆ ಕಾಲೇಜಿನ ಉಪನ್ಯಾಸಕರ /ಪ್ರಾಂಶುಪಾಲರ ದೂರವಾಣಿ ಸಂಖ್ಯೆಯನ್ನು facilitator ಆಗಿ ಬಳಸಿ ಲಸಿಕಾಕರಣ ನಡೆಸಲಾಗುವುದು.
6. ಕಾಲೇಜಿನ ಗುರುತಿನ ಚೀಟಿ/ಆಧಾರ್ ಅನ್ನು ಫೋಟೋ ಐಡಿ ಆಗಿ ಬಳಸಲಾಗುವುದು.
7. ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಪ್ರಾಂಶುಪಾಲರು ಲಸಿಕಾ ಕಾರ್ಯಕ್ರಮದ ಮೇಲ್ವಿಚಾರಣೆ ನಡೆಸುವುದು.
8. ಆರೋಗ್ಯ ಇಲಾಖೆಯ ಸಿಬ್ಬಂದಿಯು ಫಲಾನುಭವಿ ಮಕ್ಕಳ ಲಸಿಕಾಕರಣದ ವೈದ್ಯಕೀಯ ಅರ್ಹತೆ ಬಗ್ಗೆ, ಲಸಿಕಾಕರಣ ಸಮಯದಲ್ಲಿ SOP ಗಳ ಕಡ್ಡಾಯ ಪಾಲಿಸುವಿಕೆ ಮತ್ತು ಲಸಿಕಾಕರಣದ ನಂತರ ಉಂಟಾಗಬಹುದಾದ ಯಾವುದೇ ಅಡ್ಡಪರಿಣಾಮಗಳ ನಿರ್ವಹಣೆಗಾಗಿ ಸಕಲ ಸಿದ್ಧತೆ ಮಾಡಿಕೊಂಡಿರುವುದನ್ನು ಖಚಿತಪಡಿಸಿಕೊಳ್ಳುವುದು.
9. ಸಹ ಅಸ್ವಸ್ಥತೆ ಹೊಂದಿರುವ ಮಕ್ಕಳ ಲಸಿಕಾಕರಣಕ್ಕೆ ಪೋಷಕರ ಸಹಮತ ಪಡೆಯುವುದು ಮತ್ತು ಆರೋಗ್ಯ ಕೇಂದ್ರಗಳಲ್ಲಿಯೇ ವೈದ್ಯರ ಮೇಲ್ವಿಚಾರಣೆಯಲ್ಲಿ ಕೈಗೊಳ್ಳುವುದು.
10. ಮಕ್ಕಳ ಲಸಿಕಾಕರಣದಲ್ಲಿ ಉಪನ್ಯಾಸಕರು ಹಾಗೂ ಬೆಂಬಲ ಸಿಬ್ಬಂದಿ ಸಕ್ರಿಯವಾಗಿ ಪಾಲ್ಗೊಳ್ಳುವುದು.
11. ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಜಂಟಿ ನಿರ್ದೇಶಕರನ್ನು ತಮ್ಮ ಪ್ರಾದೇಶಿಕ ಕಾರ್ಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಕಾಲೇಜುಗಳ ಲಸಿಕಾಕರಣದ ಮೇಲುಸ್ತುವಾರಿಗಾಗಿ ನಿಯೋಜಿಸುವುದು.
12. ಎಲ್ಲಾ ಹಂತಗಳಲ್ಲಿ ಕೋವಿಡ್-19 ಲಸಿಕಾಕರಣದ ಮಾರ್ಗಸೂಚಿಗಳನ್ನು ತಪ್ಪದೇ ಪಾಲಿಸುವುದು.

ಈ ಕಾರ್ಯಕ್ರಮದ ಯಶಸ್ವಿ ಅನುಷ್ಠಾನಕ್ಕಾಗಿ ತಮ್ಮ ಅತ್ಯಮೂಲ್ಯ ಸಹಕಾರ ಕೋರಲಾಗಿದೆ.

ಅಭಿಯಾನ ನಿರ್ದೇಶಕರು
ರಾಷ್ಟ್ರೀಯ ಆರೋಗ್ಯ ಅಭಿಯಾನ

ಮಾಹಿತಿಗಾಗಿ:

1. ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು, ಕರ್ನಾಟಕ ಸರ್ಕಾರ.
2. ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ.
3. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು.

4. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು
5. ಅಪರ ನಿರ್ದೇಶಕರು,ರಾಷ್ಟ್ರೀಯ ಆರೋಗ್ಯ ಅಭಿಯಾನ, ಬೆಂಗಳೂರು.
6. ಯೋಜನಾ ನಿರ್ದೇಶಕರು (ಆರ್.ಸಿ.ಹೆಚ್), ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು
7. ಉಪ ನಿರ್ದೇಶಕರು(ಲಸಿಕೆ), ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು
8. ಉಪ ನಿರ್ದೇಶಕರು,ರಾಷ್ಟ್ರೀಯ ಆರೋಗ್ಯ ಅಭಿಯಾನ, ಬೆಂಗಳೂರು.
9. ಕಛೇರಿ ಪ್ರತಿ.